# ಶ್ರೀರಾಮಕೃಷ್ಣರ ಉಪಮೆಗಳು – ಒಂದು ಸಮೀಕ್ಷೆ

ಡಾ. ಎಚ್.ವಿ. ನಾಗರಾಜರಾವ್

**ಎ**ರಡು ವಸ್ತುಗಳಲ್ಲಿ ಸಮಾನಧರ್ಮವನ್ನು ಕಂಡು ಅಥವಾ ಕಲ್ಪಿಸಿ ಹೋಲಿಸುವುದನ್ನು **ಉಪಮೆ** ಎನ್ನುತ್ತಾರೆ. ಶಾಸ್ತ್ರದಲ್ಲಿ ಇದನ್ನು **'ಸುಂದರಂ ಸಾದೃಶ್ಯಮ್ ಉಪಮಾಲಂಕಾರಃ'** – ಸುಂದರವಾದ ಸಾದೃಶ್ಯವನ್ನು ಹೇಳುವುದೇ ಉಪಮಾಲಂಕಾರ ಎಂದು ವಿವರಿಸುತ್ತಾರೆ. ಮಾನವನು ಮಾತನಾಡಲು ಆರಂಭಿಸಿ ದಾಗಿನಿಂದ ಉಪಮೆಯನ್ನು ಬಳಸುತ್ತಿದ್ದಾನೆಂದು ತೋರುತ್ತದೆ. ಯಾವ ವಸ್ತುವನ್ನು ಪರಿಚಯಿಸಬೇಕೋ ಅದಕ್ಕೆ ಒಂದು ಉಪ ಮಾನವನ್ನು ಕೊಟ್ಟು ಹೇಳಿದರೆ ಪರಿಚಯ ಅಥವಾ ಜ್ಞಾನ ದೃಢವಾಗುತ್ತದೆ. ಪ್ರಪಂಚದ ಅತ್ಯಂತ ಪ್ರಾಚೀನ ಸಾಹಿತ್ಯವಾದ ಋಗ್ವೇದದಲ್ಲೇ ಅನೇಕ ಸುಂದರ ಹೋಲಿಕೆಗಳು ಅಥವಾ ಉಪಮೆಗಳು ಇವೆ.

**ಸಕ್ತುಮಿವ ತಿತಉನಾ ಪುನಂತೋ ಯತ್ರ ಧೀರಾಃ**


**ಮನಸಾ ವಾಚಮಕ್ರತ**

"ಜರಡಿಯಿಂದ ಹಿಟ್ಟನ್ನು ಶೋಧಿಸಿದಂತೆ ಧೀರರು ಮನಸ್ಸಿನಿಂದ ಮಾತನ್ನು ಶುದ್ಧಗೊಳಿಸಿ ಭಾಷೆಯನ್ನು ಮಾಡಿದರು" ಎಂಬ ಮೇಲಿನ ಮಂತ್ರದಲ್ಲಿ ಉಪಮೆಯನ್ನು ಕಾಣಬಹುದು.

**'ಉಪಮಾ ಕವಿವಂಶಸ್ಯ ಮಾತೈವೇತಿ ಮತಿರ್ಮಮ'** – ಕವಿಗಳಿಗಂತೂ ಉಪಮೆಯೇ ತಾಯಿ ಎಂದು ಆಲಂಕಾರಿಕರು ಹೇಳುತ್ತಾರೆ. ಮಹಾಕವಿ ಕಾಳಿದಾಸನು ಉಪಮೆಗಳನ್ನು ಕೊಡು ವುದರಲ್ಲಿ ನಿಪುಣ. **'ಉಪಮಾ ಕಾಳಿದಾಸಸ್ಯ'** ಎಂಬ ಮಾತು ಪ್ರಚಲಿತವಾಗಿದೆ. ಉಪಮೆಯಲ್ಲಿ ನಾನಾ ಪ್ರಕಾರಗಳಿವೆ. ಸಂಸ್ಕೃತ ದಲ್ಲಂತೂ ಇದರ ವೈವಿಧ್ಯ ಹೇರಳವಾಗಿದೆ. ವ್ಯಾಕರಣದಲ್ಲಿ ಇದರ ವಿಶ್ಲೇಷಣೆಯನ್ನು ಸೂಕ್ಷ್ಮದೃಷ್ಟಿಯಿಂದ ಮಾಡಲಾಗಿದೆ.

ಪೂಜ್ಯರಾದ ಶ್ರೀರಾಮಕೃಷ್ಣ ಪರಮಹಂಸರಿಗೆ ಕವಿ ಹೃದಯ ವಿತ್ತು, ಅಪಾರವಾದ ಲೋಕಾನುಭವವಿತ್ತು. ಆದ್ದರಿಂದ ಅವರು ಜೀವನದ ನಾನಾ ಮಜಲುಗಳಿಂದ ಹೋಲಿಕೆಗೆ ಒಳಪಡುವ ಸೊಗಸಾದ ಉಪಮೆಗಳನ್ನು, ದೃಷ್ಟಾಂತಗಳನ್ನು ಕೊಟ್ಟು ತಮ್ಮ ಉಪದೇಶವು ಶ್ರೋತೃಗಳ ಮನಸ್ಸಿಗೆ ಮುಟ್ಟುವಂತೆ ಮಾಡುತ್ತಿದ್ದರು.

ಶ್ರೀರಾಮಕೃಷ್ಣರು ತಮ್ಮ ಮಾತುಕತೆಗಳಲ್ಲಿ, ಉಪಮೆಗಳನ್ನು ಮತ್ತು ದೃಷ್ಟಾಂತಗಳನ್ನು ಯಥೇಚ್ಛವಾಗಿ ಮತ್ತು ಅತ್ಯಂತ ಪರಿಣಾಮಕಾರಿಯಾಗಿ ಉಪಯೋಗಿಸಿದ್ದರು. ಇದನ್ನು ಪರಿಚಯಿಸಿರುವ ಲೇಖಕರು ಸಂಸ್ಕೃತ ವಿದ್ವಾಂಸರು; ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ನಿವೃತ್ತ ಸಂಶೋಧಕರು.



ಅವರ ಉಪಮೆಗಳು ಸಹಜವಾಗಿರುತ್ತಿದ್ದುವು. ಕೆಲವರು ಕವಿಗಳು ಚಮತ್ಕಾರಕ್ಕಾಗಿ ಕೃತ್ರಿಮ ಉಪಮೆಗಳನ್ನು ಕೊಟ್ಟಿರುವುದೂ ಉಂಟು. ಆದರೆ ಶ್ರೀರಾಮಕೃಷ್ಣರಲ್ಲಿ ಅಂಥ ಕೃತ್ರಿಮತೆ ಇರಲಿಲ್ಲ. ಸರಳವಾದ ಮತ್ತು ಎಲ್ಲರ ಜೀವನಾನುಭವಕ್ಕೆ ಸಿಗುವ ಉಪಮೆ ಗಳನ್ನು ಅವರು ಕೊಡುತ್ತಿದ್ದರು. ಅಂತಹ ಕೆಲವು ಉದಾಹರಣೆ ಗಳನ್ನು ನೋಡೋಣ.

ಮನುಷ್ಯನು ಅಹಂಕಾರವನ್ನು ಕೊಡವಿಹಾಕಲು ಪ್ರಯತ್ನಿಸಿ ದರೂ ಅದು ಪೂರ್ಣವಾಗಿ ಬಿಟ್ಟುಹೋಗುವುದಿಲ್ಲ; ಹೋದಾ ಗಲೂ ತನ್ನ ಗುರುತನ್ನು ಬಿಟ್ಟು ಹೋಗುತ್ತದೆ ಎಂದು ಉಪ ದೇಶಿಸಿದ ಪರಮಹಂಸರು, 'ತೆಂಗಿನ ಮರದ ಗರಿಗಳು ಬಿದ್ದು ಹೋದರೂ ಅವು ತಮ್ಮ ಗುರುತನ್ನು ಉಳಿಸಿಹೋಗುವಂತೆ' ಎಂಬ ಉಪಮೆಯನ್ನು ಕೊಡುತ್ತಾರೆ. ತೆಂಗಿನಮರವನ್ನು ನೋಡಿ ರುವ ಎಲ್ಲರಿಗೂ ಇದು ಸ್ಪಷ್ಟವಾಗಿ ತಿಳಿಯುತ್ತದೆ. ಪಟ್ಟಣಿಗರಿಗೆ ಅಥವಾ ವಿದ್ಯಾವಂತರಿಗೆ ಮಾತ್ರ ಅಲ್ಲ, ಹಳ್ಳಿಯವರಿಗೂ ಶಾಲೆಯ ಮೆಟ್ಟಿಲನ್ನು ಏರದವರಿಗೂ ಅರ್ಥವಾಗುವ ಸುಂದರ ಉಪಮೆ ಇದು.

ದೇವರು ಮನುಷ್ಯನಲ್ಲೇ ಇದ್ದಾನೆ, ಅವನು ನಾವು ಮಾಡು ವುದನ್ನೆಲ್ಲ ನೋಡಬಲ್ಲನು, ನಾವು ಮಾತ್ರ ಅವನನ್ನು ಕಾಣ

ಲಾರೆವು ಎಂಬ ತತ್ತ್ವವನ್ನು ಉಪದೇಶಿಸಿದ ಶ್ರೀರಾಮಕೃಷ್ಣರು 'ಪರದೆಯ ಹಿಂದೆ ಇರುವ ಶ್ರೀಮಂತರ ಮನೆಯ ಹೆಂಗಸರಂತೆ' ಎಂಬ ಉಪಮಾನವನ್ನು ಕೊಟ್ಟರು. ಅವರು ಎಲ್ಲರನ್ನು ನೋಡಲು ಸಾಧ್ಯ, ಅವರು ನಮಗೆ ಕಾಣಿಸುವುದಿಲ್ಲ ಎಂಬುದು ಅನುಭವಾರೂಢವಾಗಿರುವುದರಿಂದ ಈ ಉಪಮೆ ಅತ್ಯಂತ ಯುಕ್ತವೂ ಪರಿಣಾಮಕಾರಿಯೂ ಆಗಿದೆ.

ಸಾಧಕನು ಶಾಸ್ತ್ರಗಳ ಅಧ್ಯಯನವನ್ನು ಮಾಡುತ್ತಾನೆ. ಅನೇಕ ಶಾಸ್ತ್ರಾರ್ಥಗಳನ್ನು ಚರ್ಚಿಸುತ್ತಾನೆ. ಇದೆಲ್ಲ ಎಲ್ಲಿಯವರೆಗೆ? ಆತ್ಮಾನುಭವದ ಸವಿ ದೊರಕುವವರೆಗೆ. ಸಮಾಧಿಯ ಆನಂದ ದೊರೆತ ಮೇಲೆ ಯಾವ ಚರ್ಚೆಯೂ ಬೇಡ, ಯಾವ ಸದ್ದೂ ಇಲ್ಲ ಎಂದರು ಪರಮಹಂಸರು. ಅದು ಮನಸ್ಸಿಗೆ ನಾಟುವಂತೆ ಮಾಡಲು ದುಂಬಿಯ ಉಪಮೆಯನ್ನು ಕೊಟ್ಟರು. ದುಂಬಿ ಝೇಂಕಾರ ಮಾಡುತ್ತಾ ಅಲೆಯುತ್ತಿರುತ್ತದೆ. ಹೂವಿನ ಮಕರಂದ ವನ್ನು ಹೀರಲು ಆರಂಭಿಸಿದರೆ ಎಲ್ಲ ಝೇಂಕಾರವೂ ಸ್ತಬ್ಧ. ಆಗ ದುಂಬಿ, ಮೌನಿ ಜ್ಞಾನಿಯ ಹಾಗೆ ಮೌನವಾಗಿರುತ್ತದೆ ಎಂದು ಅವರು ವಿವರಿಸಿದಾಗ ಎಲ್ಲರೂ ತಲೆದೂಗಿದರು.

ಹಾಗೆಯೇ ಉತ್ಸವದ ಸಮಯದಲ್ಲಿ ಊಟಕ್ಕೆ ಕುಳಿತುಕೊಂಡ ಜನರು ಮಾತನಾಡುತ್ತಿರುತ್ತಾರೆ. ಇದನ್ನು ಸಾಧಕನ ಆರಂಭಿಕ ಅವಸ್ಥೆಗೆ ಹೋಲಿಸಬಹುದು. ಆದರೆ, ಊಟ ಮುಂದುವರಿ ದಂತೆಲ್ಲ, ಮಾತು ಕಡಮೆಯಾಗುತ್ತದೆ, ಕೊನೆಗೆ ನಿಶ್ಶಬ್ದ. ಇದನ್ನು ಸಾಧಕನ ಸಿದ್ಧಿಗೆ ಹೋಲಿಸಬಹುದು. ಎಂತಹ ರೋಚಕ ಉದಾಹರಣೆ ಶ್ರೀರಾಮಕೃಷ್ಣರದು!

ಭಗವಂತನು ಸಾಕಾರನೋ ನಿರಾಕಾರನೋ ಎಂದು ಭಕ್ತರು ಕೇಳಿದರು. ಅವನು ಸಾಕಾರನೂ ಹೌದು, ನಿರಾಕಾರನೂ ಹೌದು ಎಂದು ಪರಮಹಂಸರು ಹೇಳಿದರು. ಅದು ಹೇಗೆ ಸಾಧ್ಯ? ಸಾಕಾರ-ನಿರಾಕಾರ ಎಂಬುದು ಪರಸ್ಪರ ವಿರುದ್ಧವಲ್ಲವೆ? ಎಂದು ಎಲ್ಲರಿಗೂ ಸಂಶಯ ಹುಟ್ಟಿತು. ಆಗ ಪರಮಹಂಸರು ನೀರು ಮತ್ತು ಹಿಮದ ಗಡ್ಡೆಯ ಉಪಮೆಯನ್ನು ಕೊಟ್ಟರು. ನೀರಿಗೆ ಯಾವ ನಿರ್ದಿಷ್ಟ ಆಕಾರವೂ ಇಲ್ಲ, ಬಣ್ಣವೂ ಇಲ್ಲ. ಆದರೆ ಆ ನೀರು ಮಂಜಿನ ಗಡ್ಡೆ ಆದಾಗ ಅದಕ್ಕೆ ಒಂದು ಆಕಾರವೂ ಬಿಳಿಯ ಬಣ್ಣವೂ ಬರುತ್ತದೆ. ನೀರು ಮತ್ತು ಮಂಜಿನ ಗಡ್ಡೆ ಬೇರೆ ಬೇರೆ ಪದಾರ್ಥಗಳಲ್ಲ. ಇದೇ ಅದು, ಅದೇ ಇದು. ಸಾಕಾರವೇ ನಿರಾಕಾರ, ನಿರಾಕಾರವೇ ಸಾಕಾರ ಎಂದು ಶ್ರೀರಾಮ ಕೃಷ್ಣರು ವಿವರಿಸಿದಾಗ ಎಲ್ಲರ ಸಂಶಯಗಳ ನಿವಾರಣೆ ಆಯಿತು.

ಭಗವಂತನನ್ನು ನೋಡಿದವರು, ಅವನ ಮಹಿಮೆಯನ್ನು ಅಳೆದವರು ಬಂದು ಹೇಳಲಿ, ಆಗ ನಾವು ನಂಬುತ್ತೇವೆ ಎಂದು ಕೆಲವರು ವಿಚಾರವಾದಿಗಳೆಂದು ಹೇಳಿಕೊಳ್ಳುತ್ತಿದ್ದವರು ಹಠದಿಂದ ಹೇಳುತ್ತಿದ್ದರು. ಅವರ ಭ್ರಾಂತಿಯನ್ನು ತೊಲಗಿಸಲು ಶ್ರೀರಾಮ ಕೃಷ್ಣರು ಉಪ್ಪಿನ ಗೊಂಬೆಯ ದೃಷ್ಟಾಂತವನ್ನು ಕೊಟ್ಟರು. ಉಪ್ಪಿನ ಗೊಂಬೆ ಕಡಲಿನ ಆಳವನ್ನಳೆಯಲು ಮುಳುಗಿತಂತೆ. ಅದು ಹೊರಗೆ ಬಂದು ಹೇಳುತ್ತದೆ ಎಂದು ಕುಳಿತಿದ್ದವರು ಕುಳಿತೇ ಇದ್ದರು. ಗೊಂಬೆ ಕಡಲಿನಲ್ಲಿ ಕರಗಿಹೋಗಿತ್ತು. ಭಗವದನುಭವ ದಲ್ಲಿ ಮುಳುಗಿದವನು ಅಲ್ಲೇ ಲೀನವಾಗುತ್ತಾನೆ, ಅವನು ಬಂದು ಹೇಳುವುದು ಹೇಗೆ ಎಂದು ಅವರು ಕೇಳಿದಾಗ ವಾದಿಗಳು ಮೂಗಿನ ಮೇಲೆ ಬೆರಳಿಟ್ಟುಕೊಂಡರಂತೆ.

**೧. ಸಾಧಾರಣ ಕನ್ನಡಿ ಯಾವ ಪ್ರತಿಬಿಂಬವನ್ನೂ ಹೊಂದ ಲಾರದು. ಆದರೆ ಛಾಯಾಯಂತ್ರದ ಕನ್ನಡಿ, ರಾಸಾಯನಿಕ ಲೇಪನವನ್ನು ಪಡೆದದ್ದು ಮಾತ್ರ ಪ್ರತಿಬಿಂಬವನ್ನು ಹೊಂದುವುದು. ಇದರಂತೆಯೇ ಪ್ರೇಮದಿಂದ ಲೇಪನವಾದ ಹೃದಯ ಮಾತ್ರ ದೇವರನ್ನು ಪ್ರತಿಬಿಂಬಿಸುವುದು. ಹೃದಯದಲ್ಲಿ ಭಕ್ತಿ ಇಲ್ಲದಿದ್ದರೆ ದೇವರು ಪ್ರತಿಬಿಂಬಿಸುವುದಿಲ್ಲ....**

**೨. ಆನೆಯೊಂದು ಗುಡಿಸಿಲಿನ ಒಳಗೆ ಹೋದರೆ ಅದನ್ನು ಬುಡಸಹಿತ ಅಲ್ಲಾಡಿಸಿ ಕೊನೆಗೆ ಅದನ್ನು ಉರುಳಿಸುವಂತೆ, ಭಗವಂತನಲ್ಲಿ ಮಾಡುವ ಅದ್ಭುತ ಪ್ರೇಮ ದೇಹವೆಂಬ ಮನುಷ್ಯನ ಯಂತ್ರವನ್ನು ಕೆಳಗೆ ಉರುಳಿಸುವುದು.**

– ಶ್ರೀರಾಮಕೃಷ್ಣರ ಎರಡು ಉಪಮೆಗಳು

ಶ್ರೀರಾಮಕೃಷ್ಣರು ಬದುಕನ್ನು ಬಹು ಸೂಕ್ಷ್ಮವಾಗಿ ಅರಿತು ಕೊಂಡಿದ್ದರು. ಎಷ್ಟೇ ಮುಗ್ಧ ಸ್ವಭಾವದವರಾಗಿದ್ದರೂ ಅವರು ಜೀವನದ ರಹಸ್ಯಗಳನ್ನು ತಿಳಿದಿದ್ದರು. ಅವುಗಳನ್ನು ಯಾವ ಸಂಕೋಚವಿಲ್ಲದೆ ಹೇಳಿಬಿಡುತ್ತಿದ್ದರು. ಭಗವಂತನನ್ನು ಅರ್ಚಿಸಲು ದೂರದಿಂದ ಬರುವ ಭಕ್ತರಿಗೆ ದೈವಾನುಗ್ರಹವಾಗುತ್ತದೆ. ದೇವಾಲಯದಲ್ಲೇ, ಭಗವಂತನ ಮೂರ್ತಿಯ ಸನಿಹದಲ್ಲೇ ಇರುವವರಿಗೆ ಪೂಜೆ ಯಾಂತ್ರಿಕ ಕ್ರಿಯೆ ಆಗಿಬಿಡುವುದರಿಂದ ಅವರಿಗೆ ಅನುಗ್ರಹ ಸಿಗದೆ ಇರಬಹುದು ಎಂದು ಅವರು ಹೇಳಿದರು. ಅದಕ್ಕೆ ಅವರು ದೀಪದ ಉಪಮೆಯನ್ನು ನೀಡಿದರು. ದೀಪ ದೂರಕ್ಕೆ ಬೆಳಕನ್ನು ಚೆಲ್ಲುತ್ತದೆ. ಆದರೆ ಅದರ ಅಡಿಯಲ್ಲಿ, ಅತಿ ಸಮೀಪದಲ್ಲಿ ಕತ್ತಲೆ ಇರುತ್ತದೆ ಎಂದು ಅವರು ವಿವರಿಸಿದರು.

ಶ್ರೀರಾಮಕೃಷ್ಣರು ಕೊಟ್ಟಿರುವ ಕೆಲವು ಉಪಮೆಗಳು ಪ್ರಾಚೀನ ಸಾಹಿತ್ಯದಲ್ಲಿರುವ ಶ್ರೇಷ್ಠ ಸೂಕ್ತಿಗಳಿಗೆ ವ್ಯಾಖ್ಯಾನಗಳಂತೆ ಇವೆ.

**ರುಚೀನಾಂ ವೈಚಿತ್ರ್ಯಾದ್ ಋಜುಕುಟಿಲನಾನಾಪಥಜುಷಾಂ**
**ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ**

(ಶಿವಮಹಿಮ್ನಾ ಸ್ತೋತ್ರ)

ಎಂಬುದೊಂದು ಪ್ರಾಚೀನ ಸಂಸ್ಕೃತ ಸೂಕ್ತಿ. ಜನರು ತಮ್ಮ ತಮ್ಮ ರುಚಿಗೆ, ಸೌಕರ್ಯಕ್ಕೆ ಅನುಗುಣವಾಗಿ, ನೇರವಾದ ಅಥವಾ ವಕ್ರವಾದ ನಾನಾ ಮಾರ್ಗಗಳಿಂದ ಬೇರೆಬೇರೆ ನದಿಗಳ ನೀರು ಒಂದೇ ಸಮುದ್ರವನ್ನು ತಲುಪುವಂತೆ ಸೇರುತ್ತಾರೆ ಎಂಬುದು ಇದರ ಅರ್ಥ.

ಇಂದ್ರಂ ಮಿತ್ರಂ ವರುಣಮಗ್ನಿಮಾಹು–
ರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ।
ಏಕಂ ಸದ್ವಿಪ್ರಾ ಬಹುಧಾ ವದಂತಿ
ಅಗ್ನಿಂ ಯಮಂ ಮಾತರಿಶ್ವಾನಮಾಹುಃ ॥

ಎಂಬುದು ಋಗ್ವೇದದಲ್ಲಿ ಬರುವ ಮಂತ್ರ (ಋಗ್ವೇದ, ೧.೧೬೪.೪೬). ವಿದ್ವಾಂಸರು ಒಬ್ಬ ದೇವರನ್ನೇ ನಾನಾ ನಾಮಗಳಿಂದ ಕರೆಯುತ್ತಾರೆ. ಇಂದ್ರ, ಮಿತ್ರ, ವರುಣ, ಅಗ್ನಿ, ದಿವ್ಯನಾದ ಪಕ್ಷಿ ರೂಪದ ಸುಪರ್ಣ, ಯಮ, ವಾಯು ಎಂದೆಲ್ಲ ಕರೆಯುವುದು ಒಬ್ಬ ದೇವನನ್ನೇ ಎಂದು ಈ ಮಂತ್ರದ ತಾತ್ಪರ್ಯ.

ಇದನ್ನು ಪರಮಹಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆನ್ನಬಹುದು. ಅವರು ಹೇಳುತ್ತಾರೆ, ದೇವರೊಬ್ಬನೇ ಇದ್ದಾನೆ, ಹೆಸರುಗಳು ಮಾತ್ರ ಬೇರೆ. ಒಂದೇ ನೀರಿಗೆ ಬಂಗಾಳಿಯಲ್ಲಿ 'ಜೋಲ್' ಎನ್ನುತ್ತಾರೆ, ಹಿಂದಿಯಲ್ಲಿ 'ಪಾನಿ' ಎಂದೂ, ಇಂಗ್ಲಿಷಿನಲ್ಲಿ 'ವಾಟರ್' ಎಂದೂ. ಇನ್ನೊಂದು ಭಾಷೆಯಲ್ಲಿ 'ಅಕ್ವಾ' ಎಂದೂ ಕರೆಯುವ ಹಾಗೆ.

ಈ ಉಪಮೆಯು ವೇದಮಂತ್ರದ ಅರ್ಥವನ್ನು ಮಗುವಿಗೂ ಸುಲಭವಾಗಿ ತಿಳಿಯುವಂತೆ ಮಾಡಿದೆ. ಅದಕ್ಕೆ ಹೇಳುವುದು, ಕಷ್ಟವಾದ ವಿಷಯವನ್ನು ಸರಳ ಭಾಷೆಯಲ್ಲಿ ಹೇಳುವವನು ಜ್ಞಾನಿ. ಸರಳವಾದ ವಿಷಯವನ್ನು ಕಷ್ಟವಾದ ಮಾತುಗಳಲ್ಲಿ ಹೇಳುವವನು ಪಂಡಿತ. ಪರಮಹಂಸರು ಬರಿಯ ಪಂಡಿತರಲ್ಲ, ಜ್ಞಾನಿಗಳು.

ವೀತರಾಗಸ್ಯ ಲೋಕೋಽಯಂ ಜಡೋನ್ಮತ್ತಪಿಶಾಚವತ್ ।
ವೀತರಾಗೋಽಪಿ ಲೋಕಸ್ಯ ಜಡೋನ್ಮತ್ತಪಿಶಾಚವತ್ ॥

ಎಂಬ ಪ್ರಾಚೀನ ಸಂಸ್ಕೃತ ಪದ್ಯವಿದೆ. ವಿರಾಗಿಗೆ ಪ್ರಾಪಂಚಿಕ ಜನರು ದಡ್ಡರಂತೆ, ಹುಚ್ಚರಂತೆ, ಪಿಶಾಚಿಗಳಂತೆ ಕಾಣಿಸುತ್ತಾರೆ. ಪ್ರಾಪಂಚಿಕ ಜನರಿಗೆ ವಿರಾಗಿಯೂ ದಡ್ಡನಂತೆ, ಹುಚ್ಚನಂತೆ, ಪಿಶಾಚಿಯಂತೆ ಕಾಣಿಸುತ್ತಾನೆ ಎಂದು ಇದರ ಅರ್ಥ. ಈಗ ಪರಮಹಂಸರು ಕೊಟ್ಟಿರುವ ಒಂದು ಉಪಮೆಯನ್ನು ನೋಡೋಣ.

"ಮುಕ್ತನು ಕುಡುಕನಂತೆ ಇರುತ್ತಾನೆ. ಹೆಂಡ ಕುಡಿದ ಕುಡುಕನು ಉಟ್ಟಿರುವ ಪಂಚೆಯನ್ನು ಬಿಚ್ಚಿ ಕುತ್ತಿಗೆಗೆ ಸುತ್ತಿಕೊಳ್ಳುತ್ತಾನೆ ಅಥವಾ ಪೇಟದಂತೆ ತಲೆಗೆ ಕಟ್ಟಿಕೊಳ್ಳುತ್ತಾನೆ ಅಥವಾ ಬೀದಿಯಲ್ಲಿ ಎಸೆಯುತ್ತಾನೆ. ಮುಕ್ತನೂ ಈ ಲೋಕದ ವ್ಯವಹಾರವನ್ನು ಇಷ್ಟಬಂದಂತೆ ಮಾಡಬಹುದು ಅಥವಾ ಬಿಟ್ಟುಬಿಡಬಹುದು."

ಇದು ಮೇಲೆ ಉದಾಹರಿಸಿದ ಪದ್ಯದ ವಿವರಣೆ ಎಂದರೆ ತಪ್ಪಿಲ್ಲ. ಎಲ್ಲ ಶಾಸ್ತ್ರಗಳ ರಹಸ್ಯಗಳೂ ಪರಮಹಂಸರಿಗೆ ತಾವಾಗಿ ತಿಳಿದಿರುತ್ತಿದ್ದವು. ಆದ್ದರಿಂದಲೇ ಅವರು ಸಾಮಾನ್ಯ ಭಕ್ತರಿಗೂ ಅರ್ಥವಾಗುವಂತೆ ಲೌಕಿಕ ಉದಾಹರಣೆಗಳನ್ನು ಕೊಟ್ಟು ಸ್ಪಷ್ಟಪಡಿಸಿರುತ್ತಾರೆ.

ಶ್ರೀರಾಮಕೃಷ್ಣರು ಭಕ್ತರಿಗೆ ಬೆಕ್ಕಿನ ಮರಿಗಳನ್ನೂ, ಕೋತಿ ಮರಿಗಳನ್ನೂ ಉಪಮಾನವನ್ನಾಗಿ ಕೊಟ್ಟಿದ್ದಾರೆ. ಕೋತಿ ಮರಿಯು ತಾಯಿಯನ್ನು ಬಿಗಿಯಾಗಿ ಅಪ್ಪಿ ಹಿಡಿದುಕೊಳ್ಳುತ್ತದೆ. ಆಗ ತಾಯಿ ಮರಿಯನ್ನು ಬೇಕಾದ ಸ್ಥಳಕ್ಕೆ ಒಯ್ಯುತ್ತದೆ. ಬೆಕ್ಕಿನ ಮರಿಗೆ ತಾಯಿಯನ್ನು ಅಪ್ಪಿಕೊಳ್ಳುವ ಶಕ್ತಿಯೂ ಇಲ್ಲ. ತಾಯಿಯೇ ಬಾಯಿಂದ ಅದನ್ನು ಕಚ್ಚಿ ಹಿಡಿದು ಸುರಕ್ಷಿತ ಸ್ಥಳಕ್ಕೆ ಒಯ್ಯುತ್ತದೆ. ಜ್ಞಾನಯೋಗಿಯು ಮನಸ್ಸನ್ನು ಸ್ವಪ್ರಯತ್ನದಿಂದ ಭಗವಂತನಲ್ಲಿ ನಿಲ್ಲಿಸುತ್ತಾನೆ. ಅದರಿಂದ ಅವನಿಗೆ ಮೋಕ್ಷ ಸಿಕ್ಕುತ್ತದೆ. ಆದರೆ ಭಕ್ತಿಯೋಗಿ ತನ್ನ ಸಂಪೂರ್ಣ ಭಾರವನ್ನು ಭಗವಂತನಲ್ಲಿ ಅರ್ಪಿಸಿರುತ್ತಾನೆ. ಭಗವಂತನೇ ಕರುಣೆಯಿಂದ ಅವನನ್ನು ಮೋಕ್ಷಕ್ಕೆ ಒಯ್ಯುವನು. ಜ್ಞಾನಯೋಗಿ ಕೋತಿಮರಿಯಂತೆ, ಭಕ್ತಿಯೋಗಿ ಬೆಕ್ಕಿನ ಮರಿಯಂತೆ ಎಂದು ಉಪಮೆಯ ವಿವರಣೆ. ಇದನ್ನು ವಿಶಿಷ್ಟಾದ್ವೈತದರ್ಶನದಲ್ಲಿ **ಮರ್ಕಟ ಕಿಶೋರ ನ್ಯಾಯ** ಮತ್ತು **ಬಿಡಾಲ ಕಿಶೋರ ನ್ಯಾಯ** ಎಂದು ಕರೆದಿದ್ದಾರೆ. ಮರ್ಕಟ ಎಂದರೆ ಕೋತಿ, ಬಿಡಾಲ ಎಂದರೆ ಬೆಕ್ಕು, ನ್ಯಾಯ ಎಂದರೆ ದೃಷ್ಟಾಂತ.

ಹೀಗೆ ಶ್ರೀರಾಮಕೃಷ್ಣರ ಉಪಮೆಗಳಲ್ಲಿ ಹಿಂದಿನ ಕಾಲದ ಜ್ಞಾನರಾಶಿಯು ಹುದುಗಿದೆ, ಅವರ ಕಾಲದ ಅನುಭವವೂ ಅಲ್ಲಿ ಹೆಪ್ಪುಗಟ್ಟಿದೆ. ಅಧ್ಯಾತ್ಮಜ್ಞಾನವನ್ನು ಪಡೆಯಲು ಅವರ ಉಪಮೆಗಳೂ ದೃಷ್ಟಾಂತಗಳೂ ಕೈದೀವಿಗೆಯಂತಿವೆ.

**ಒಂದು ದಿನ ಶ್ರೀಮಂತನ ಆಳೊಬ್ಬನು ಬಂದು ದೂರದಲ್ಲಿ ಅತಿ ದೈನ್ಯದಿಂದ ಬಂದು ನಿಂತುಕೊಂಡನು. ತನ್ನ ಕೈಯಲ್ಲಿ ಏನನ್ನೋ ಬಟ್ಟೆಯಿಂದ ಕಟ್ಟಿ ಇಟ್ಟುಕೊಂಡಿದ್ದನು. ಧಣಿಯು "ನಿನ್ನ ಕೈಯಲ್ಲಿ ಇರುವುದೇನು?" ಎಂದು ಕೇಳಿದನು. ಆಳು ಬಹಳ ವಿನಯದಿಂದ ಬಟ್ಟೆಯಲ್ಲಿದ್ದ ಒಂದು ಸಣ್ಣ ಸೀತಾಫಲವನ್ನು ಒಡೆಯನ ಮುಂದಿಟ್ಟು, ಸ್ವೀಕರಿಸಿದರೆ ತಾನು ಕೃತಜ್ಞನೆಂದು ಮನಸ್ಸಿನಲ್ಲಿಯೇ ಯೋಚಿಸಿಕೊಂಡನು. ಆ ಶ್ರೀಮಂತನಿಗೆ ಆಳಿನ ವಿಶ್ವಾಸ ಪೂರ್ವಕ ಭಕ್ತಿಯನ್ನು ನೋಡಿ ತುಂಬಾ ಆನಂದವಾಯಿತು. ಆ ಹಣ್ಣು ಏನೂ ಕೆಲಸಕ್ಕೆ ಬಾರದಿದ್ದರೂ ಅದನ್ನು ಸ್ವೀಕರಿಸಿ, "ಓ, ಇದು ಎಷ್ಟು ಚೆನ್ನಾಗಿದೆ. ಇದು ನಿನಗೆ ಎಲ್ಲಿ ಸಿಕ್ಕಿತು?" ಎಂದು ಕೇಳಿದನು. ದೇವರು ಭಕ್ತನ ಹೃದಯವನ್ನು ನೋಡುವುದೂ ಕೂಡ ಹೀಗೆಯೇ. ಭಗವಂತನಿಗೆ ಅನಂತ ಐಶ್ವರ್ಯ ಇರುವುದು. ಆದರೂ ಭಕ್ತರ ಪ್ರೇಮ ಮತ್ತು ಭಕ್ತಿಯ ಪ್ರಭಾವಕ್ಕೆ ಒಲಿಯುವನು.** –ಶ್ರೀರಾಮಕೃಷ್ಣರ ದೃಷ್ಟಾಂತ ಕಥೆ